ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ಧಾರವಾಡ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಒಳಪಟ್ಟ ಒಟ್ಟು 930 ದೇವಾಲಯಗಳು / ಅಧಿಸೂಚಿತ ಸಂಸ್ಥೆಗಳಿರುತ್ತವೆ.

ಆ) ಕಳೆದ ಮೂರು ವರ್ಷಗಳಲ್ಲಿ ಧಾರವಾಡ ಜಿಲ್ಲೆಯಲ್ಲಿರುವ ಮುಜರಾಯಿ ದೇವಸ್ಥಾನಗಳಿಗೆ ಈ ಕೆಳಕಂಡಂತೆ ಒಟ್ಟು ₹ 389.70 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಈವರೆಗೆ ₹ 237.51 ಲಕ್ಷಗಳನ್ನು ವಿನಿಯೋಗಿಸಲಾಗಿದೆ. ವಿವರ ಈ ಕೆಳಕಂಡಂತಿದೆ:–

(₹ ಲಕ್ಷಗಳಲ್ಲಿ)

ವರ್ಷ	ಬಿಡುಗಡೆಯಾದ ಮೊತ್ತ	ವಿನಿಯೋಗಿಸಿದ ಮೊತ್ತ	ಉಳಿಕ
2011–12	116.70	116.70	0.00
2012–13	170.00	115.31	54.69
2014–15	103.00	5.50	97.50
ಒಟ್ಟು	**389.70**	**237.51**	**152.19**

ಇ) ಹೌದು.

ಈ) ಅನುದಾನ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ನಿಯಮಾನುಸಾರ ಅನುದಾನ ಲಭ್ಯತೆಗನುಗುಣವಾಗಿ ಬಿಡುಗಡೆ ಮಾಡಲಾಗುತ್ತದೆ.

ಹೈನುಗಾರಿಕೆ ಅಭಿವೃದ್ಧಿಪಡಿಸಲು ಪ್ರೋತ್ಸಾಹಿಸುವುದು

1081 (1569); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಜ್ಯದಲ್ಲಿ ಕೃಷಿಕರಿಗೆ ಆರ್ಥಿಕ ಚೈತನ್ಯ ನೀಡಬಹುದಾದ ಪಶುಸಂಗೋಪನೆ ಮತ್ತು ಹೈನುಗಾರಿಕೆ ಅಭಿವೃದ್ಧಿಪಡಿಸಿ

ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ಅನುಷ್ಠಾನಗೊಳಿಸಿರುವ ಯೋಜನೆಗಳು ಯಾವುವು;

ಆ) ಅಕಾಲಿಕ ಕಾಲುಬಾಯಿ ಜ್ವರ ಮತ್ತಿತರ ಜಾನುವಾರುಗಳನ್ನು ಬಾದಿಸುವ ಖಾಯಿಲೆಗಳನ್ನು ಮುಂಚಿತವಾಗಿ ಗುರುತಿಸಿ ರೋಗ ವ್ಯಾಪಕವಾಗಿ ಹರಡದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಮಾಹಿತಿ ನೀಡುವುದು);

ಇ) ಕಳೆದ ಎರಡು ವರ್ಷಗಳಿಂದ ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನಾದ್ಯಂತ ಕಾಲುಬಾಯಿ ಜ್ವರದಿಂದಾಗಿ ಜಾನುವಾರುಗಳು ಸತ್ತಿರುವ ಪ್ರಕರಣಗಳಲ್ಲಿ ರೈತರಿಗೆ ನಷ್ಟ ಉಂಟಾಗಿದ್ದು ಅಂತಹ ರೈತರಿಗೆ ಸರ್ಕಾರ ಬಿಡುಗಡೆ ಮಾಡಿದ ಪರಿಹಾರದ ಮೊತ್ತವೆಷ್ಟು ಹಾಗೂ ಫಲಾನುಭವಿಗಳ ಸಂಖ್ಯೆ ಎಷ್ಟು;

ಈ) ಕಳೆದ ಎರಡು ವರ್ಷಗಳಿಂದ ಈ ರೋಗದಿಂದ ಸತ್ತ ಜಾನುವಾರುಗಳ ರೈತರಿಗೆ ಪರಿಹಾರ ಧನವನ್ನು ಸಂಪೂರ್ಣವಾಗಿ ವಿತರಿಸಲಾಗಿದೆಯೇ;

ಉ) ಹಾಗಿಲ್ಲದಿದ್ದಲ್ಲಿ, ರೈತರಿಗೆ ಪರಿಹಾರಧನವನ್ನು ಎಂದು ವಿತರಿಸಲಾಗುವುದು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) ರಾಜ್ಯದಲ್ಲಿ ಕೃಷಿಕರಿಗೆ ಆರ್ಥಿಕ ಚೈತನ್ಯ ನೀಡಬಹುದಾದ ಪಶುಸಂಗೋಪನೆ ಮತ್ತು ಹೈಗುನಾರಿಕೆ ಅಭಿವೃದ್ಧಿಪಡಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ಅನುಷ್ಠಾನಗೊಳಿಸಿರುವ ಯೋಜನೆಗಳ ವಿವರಗಳನ್ನು **ಅನುಬಂಧ** ದಲ್ಲಿ ನೀಡಿದೆ.

ಆ) ಅಕಾಲಿಕ ಕಾಲುಬಾಯಿ ಜ್ವರ ಮತ್ತಿತರ ಜಾನುವಾರುಗಳನ್ನು ಬಾಧಿಸುವ ಖಾಯಿಲೆಗಳನ್ನು ಮುಂಚಿತವಾಗಿ ಗುರುತಿಸಿ ರೋಗ ವ್ಯಾಪಕವಾಗಿ ಹರಡದಂತೆ ತಡೆಯಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ:

1. ಕಾಲುಬಾಯಿ ರೋಗ–ನಿಯಂತ್ರಣ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಪ್ರತಿ ಆರು ತಿಂಗಳಿಗೊಮ್ಮೆ ಅರ್ಹ ಜಾನುವಾರುಗಳಿಗೆ ರಾಜ್ಯದಲ್ಲಿ ಲಸಿಕಾ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ ಹಾಗೂ ಈ ಲಸಿಕೆಯಿಂದ ರೋಗನಿರೋಧಕ ಶಕ್ತಿಯನ್ನು ತಿಳಿಯುವ ಸಲುವಾಗಿ ಸೀರಂ ಮಾದರಿಗಳನ್ನು ಪರೀಕ್ಷಿಸಲಾಗುತ್ತಿದೆ.

2. ರೋಗೋದ್ರೇಕ ಕಾಣಿಸಿಕೊಂಡ ಪ್ರದೇಶಗಳಲ್ಲಿನ ಜಾನುವಾರುಗಳಿಗೆ ರಿಂಗ್ ವ್ಯಾಕ್ಸಿನೇಷನ್ ಮಾಡಲಾಗುತ್ತಿದೆ ಹಾಗೂ ಅಂತಹ ಸಂದರ್ಭದಲ್ಲಿ ಜಾನುವಾರುಗಳ ಮಾರಾಟ ಮತ್ತು ಸಾಗಾಣಿಕೆಯನ್ನು ನಿಯಂತ್ರಿಸಲಾಗುವುದು.

3. ಈ ಕಾರ್ಯಕ್ರಮದ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಹಾಗೂ ದಿನಪತ್ರಿಕೆಗಳ ಮೂಲಕ ವ್ಯಾಪಕವಾಗಿ ಪ್ರಚಾರ ಮಾಡಲಾಗುತ್ತಿದೆ ಮತ್ತು ಬ್ಯಾನರ್ಸ್, ಪೋಸ್ಟರ್ಸ್, ಕರಪತ್ರಗಳ ಮೂಲಕ ಹಾಗೂ ಪಬ್ಲಿಕ್ ಅಡ್ರೆಸ್ ಸಿಸ್ಟಂ ಬಳಸಿ ಸ್ಥಳೀಯವಾಗಿ ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ.

ಇ) ದಿನಾಂಕ: 1–9–2013 ರಿಂದ 20–12–2013ರ ವರೆಗೆ ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನಲ್ಲಿ ಒಟ್ಟು 44 ರಾಸುಗಳು ಕಾಲುಬಾಯಿ ಜ್ವರದಿಂದ ಮರಣಿಸಿದ್ದು ಅವುಗಳ ಮಾಲೀಕರಿಗೆ ಒಟ್ಟು ₹ 8,98,000/–ಗಳನ್ನು ಪರಿಹಾರ ಧನವನ್ನಾಗಿ ಪಾವತಿ ಮಾಡಲಾಗಿದೆ.

ಈ) ದಿನಾಂಕ 1–9–2013 ರಿಂದ 20–12–2013ರ ವರೆಗೆ ಈ ರೋಗದಿಂದ ಸತ್ತ 44 ಜಾನುವಾರುಗಳ ಪರಿಹಾರ ಧನವನ್ನು ರೈತರಿಗೆ ಸಂಪೂರ್ಣವಾಗಿ ವಿತರಿಸಲಾಗಿದೆ.

ಉ) ಉದ್ಭವಿಸುವುದಿಲ್ಲ.

ಅನುಬಂಧ

ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ, ರಾಯಭಾಗ್ ವಿಧಾನ ಸಭಾ ಕ್ಷೇತ್ರ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 1569

ರಾಜ್ಯದಲ್ಲಿ ಕೃಷಿಕರಿಗೆ ಆರ್ಥಿಕ ಚೈತನ್ಯ ನೀಡಬಹುದಾದ ಪಶುಸಂಗೋಪನೆ ಮತ್ತು ಹೈನುಗಾರಿಕೆ ಅಭಿವೃದ್ಧಿಪಡಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ಅನುಷ್ಠಾನಗೊಳಿಸಿರುವ ಯೋಜನೆಗಳ ವಿವರಗಳು

ಕೇಂದ್ರ ಸರ್ಕಾರದ ಯೋಜನೆಗಳು

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:–

1. ಕೇಂದ್ರ ಸರ್ಕಾರದ ಯೋಜನೆಯಾದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿ ವಿಶೇಷ ಯೋಜನೆಯಾದ NMPS ಕಾರ್ಯಕ್ರಮದಡಿಯಲ್ಲಿ ಹೈನುಗಾರಿಕೆ ಉತ್ತೇಜನಕ್ಕಾಗಿ ಮಧ್ಯಮ ಮತ್ತು ಬಡ ರೈತರಿಗೆ ಒಟ್ಟು 762.00 ಲಕ್ಷ ರೂ.ಗಳ ಯೋಜನೆ ರಾಜ್ಯ ಮಟ್ಟದಲ್ಲಿ ಅನುಮೋದನೆಯಾಗಿದ್ದು, ಮಂಜೂರಾತಿಗೆ ಭಾರತ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಯೋಜನೆ ಅಡಿಯಲ್ಲಿ ಎರಡು ಹಸು/ ಎಮೆ ಘಟಕಕ್ಕೆ ₹ 1.19 ಲಕ್ಷ ವೆಚ್ಚವಿದ್ದು, ಶೇ.25% ರಷ್ಟು ₹ 29,750/–ಗಳ ಸಹಾಯಧನ ಹಾಗೂ 5 ಎಮ್ಮೆ/ಹಸು ಘಟಕಕ್ಕೆ ₹ 2.70 ಲಕ್ಷ ಘಟಕ ವೆಚ್ಚವಿದ್ದು ಶೇ.25% ರಷ್ಟು ಸಹಾಯ ಧನ ₹ 90,000/– ಗಳಾಗಿರುತ್ತದೆ. ಒಟ್ಟು ರಾಜ್ಯಾದ್ಯಂತ 2 ಹಸು/ಎಮ್ಮೆ ಘಟಕಗಳ 1200 ಘಟಕ ಮತ್ತು 5 ಹಸು/ಎಮ್ಮೆಗಳ 450 ಘಟಕಗಳನ್ನು ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ ಮುಖಾಂತರ ಅನುಷ್ಠಾನಕ್ಕೆ ಕ್ರಮವಹಿಸಲಾಗುತ್ತಿದೆ.

2. ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಮೇವು ಬೆಳೆಯಲು ಅವಕಾಶ ಇರುವ ರೈತರಿಗೆ ಮೇವು ಅಭಿವೃದ್ಧಿಗಾಗಿ ಅಂದಾಜು ₹ 260/–ರಂತೆ ಒಂದು ಮೇವಿನ ಮಿನಿಕಿಟ್ ವಿತರಿಸಲು ₹ 500.00 ಲಕ್ಷಗಳಲ್ಲಿ

2,41,125 ಮಿನಿಕಿಟ್‌ಗಳನ್ನು 2,41,125 ರೈತರಿಗೆ ವಿತರಿಸಲು ಕ್ರಮವಹಿಸಿದೆ.

3. ಹಾಲು ಉತ್ಪಾಕರ ಸಹಕಾರ ಸಂಘಗಳ ಸದಸ್ಯರುಗಳ ಮತ್ತು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಸ್ವ–ಸಹಾಯ ಗುಂಪುಗಳಿಗೆ ಉಪಯೋಗಕ್ಕಾಗಿ ಮೇವು ಕತ್ತರಿಸಲು 1,746. ಮೂರು ಹೆಚ್.ಪಿ. ಮೇವು ಕತ್ತರಿಸುವ ಯಂತ್ರಗಳನ್ನು ಉಚಿತವಾಗಿ ವಿತರಿಸಲು ಕ್ರಮವಹಿಸಲಾಗಿದೆ. ಪ್ರತಿ ಯಂತ್ರದ ಬೆಲೆ ₹ 27,200/– ಗಳಾಗಿವೆ.

4. ಕೇಂದ್ರ ಪುರಸ್ಕೃತ ಮೇವು ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರದ ಅನುದಾನ ₹ 446.00 ಲಕ್ಷ ಮತ್ತು ರಾಜ್ಯ ಸರ್ಕಾರದ ಅನುದಾನ ₹ 1.42 ಲಕ್ಷ ಹೀಗೆ ಒಟ್ಟು ₹ 588.00 ಲಕ್ಷ ಅನುದಾನದಲ್ಲಿ ಅಂದಾಜು 3.75 ಲಕ್ಷ ರೈತರಿಗೆ 3.75 ಲಕ್ಷ ಮಿನಿಕಿಟ್‌ಗಳ ವಿತರಣೆಗೆ ಕ್ರಮವಹಿಸಲಾಗಿದೆ.

ರಾಜ್ಯ ಸರ್ಕಾರದ ಯೋಜನೆಗಳು

1. ರಾಜ್ಯ ಸರ್ಕಾರದ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಒಟ್ಟು ₹ 40.00 ಲಕ್ಷ ಅನುದಾನದಲ್ಲಿ 1,143 ಮೇವು ಪ್ರಾತ್ಯಕ್ಷತೆ ಪ್ಲಾಟ್‌ಗಳ ನಿರ್ಮಾಣಕ್ಕಾಗಿ 1,143 ರೈತರಿಗೆ ಪ್ರತಿ 0.10 ಹೆಕ್ಟೇರ್ ಪ್ರದೇಶದಲ್ಲಿ ಮೇವು ಅಭಿವೃದ್ಧಿಪಡಿಸಲು 1,083 ಫಲಾನುಭವಿಗಳಿಗೆ ಪ್ರತಿ ರೈತರಿಗೆ ₹ 3,000/– ದಂತೆ ಹಾಗೂ ಒಂದು ಎಕರೆ ಪ್ರದೇಶದಲ್ಲಿ ಮೇವು ಅಭಿವೃದ್ಧಿಪಡಿಸಲು ₹ 12,500/– ಗಳ ಸಹಾಯಧನದಂತೆ 60 ಫಲಾನುಭವಿಗಳಿಗೆ ನೀಡಿ ಅನುಷ್ಠಾನಗೊಳಿಸಲಾಗುತ್ತಿದೆ.

2. ದೇಶೀಯ ಹಸು ಸಾಕಾಣಿ ಮಾಡಿರುವ ರೈತರಿಗೆ ದೇಶಿ ಗಂಡು ಕರು ಸಾಕಾಣಿಕೆಗಾಗಿ (ಅಮೃತ್ ಮಹಲ್, ಹಳ್ಳಿಕಾರ್, ಕಿಲಾರ್, ದೇವಣಿ, ಕೃಷ್ಣವ್ಯಾಲಿ ತಳಿಗಳು) ಸಾಕಾಣಿಕೆಗಾಗಿ ಘಟಕ ವೆಚ್ಚ ₹ 20,000/– ಗಳಿದ್ದು, ಇದರಲ್ಲಿ ಶೇ.50% ರಷ್ಟು ಸಹಾಯಧನ ಪ್ರತಿ ಫಲಾನುಭವಿಗೆ

ರೂ. 10,000/– ರಂತೆ 500 ಫಲಾನುಭವಿಗಳಿಗೆ ಒಟ್ಟು ₹ 50.00 ಲಕ್ಷ ಅನುದಾನ ನಿಗದಿಯಾಗಿದ್ದು, ಕಾರ್ಯಕ್ರಮ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.

3. ಗ್ರಾಮೀಣ ಪ್ರದೇಶದ 25 ಯುವಕ/ ಯುವತಿಯರಿಗೆ/ ರೈತರಿಗೆ ಸ್ವಯಂ ಉದ್ಯೋಗ ಅವಕಾಶ ಕಲ್ಪಿಸಲು 500 ಮಾಂಸದ ಕೋಳಿಗಳ ಘಟಕದ ಸ್ಥಾಪನೆಗೆ ಪ್ರತಿ ಘಟಕಕ್ಕೆ ₹ 40,000/– ರಂತೆ ಸಹಾಯಧನ ಕಾರ್ಯಕ್ರಮ ಅನುಷ್ಠಾನ ಜಾರಿಯಲ್ಲಿದೆ.

4. ಕುರಿ ಮತ್ತು ಮೇಕೆ ಸಾಕಾಣಿದಾರರ ಕುರಿ ಮೇಕೆಗಳು ಆಕಸ್ಮಿಕ ಮರಣ ಹೊಂದಿದಲ್ಲಿ ಪ್ರತತಿ ಕುರಿ ಮತ್ತು ಮೇಕೆಗೆ ₹ 5,000/– ಗಳಂತೆ ಪರಿಹಾರ ಧನ ನೀಡಲು ಒಟ್ಟು ₹ 250.00 ಲಕ್ಷಗಳನ್ನು ನಿಗಧಿ ಪಡಿಸಿದೆ. ಇದುವರೆಗೆ 1,250 ಕುರಿ ಮತ್ತು ಮೇಕೆಗಳಿಗೆ ₹ 62.50 ಲಕ್ಷ ಪರಿಹಾರ ಧನವನ್ನು ವಿತರಿಸಲಾಗಿದೆ.

5. ಹೈನು ರಾಸು ಮತ್ತು ಕುರಿ ಸಾಗಾಣಿಕೆಗಾಗಿ ಬ್ಯಾಂಕ್ ಸಾಲದ ಬಡ್ಡಿ ಸಾಲದ ಬಡ್ಡಿ ಶೇ.6 ಕ್ಕೆ ಮೇಲ್ಪಟ್ಟ ಮೊತ್ತವನ್ನು ಸಹಾಯಧನವಾಗಿ ನೀಡಿ, ರೈತರಲ್ಲಿ ಪಶುಸಂಗೋಪನಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲಾಗುತ್ತಿದ್ದು, ವಾರ್ಷಿಕ ₹ 10.00 ಲಕ್ಷ ಅನುದಾನ ನಿಗಧಿಯಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ 2,245 ಫಲಾನುಭವಿಗಳಿಗೆ ₹ 9.83 ಲಕ್ಷಗಳ ಸಹಾಯಧನ ಈಗಾಗಲೇ ವಿತರಿಸಲಾಗಿದೆ.

6. ನಿರ್ಗತಿಕ ಹಾಗೂ ಸಂಕಷ್ಟಕ್ಕೊಳಗಾದ ಮಹಿಳೆಯರು ಗೌರವಿತವಾಗಿ ಜೀವನ ನಡೆಸಲು ₹ 50,000/– ಗಳ ಮೊತ್ತದಲ್ಲಿ ಒಂದು ಹಸು/ಎಮ್ಮೆ ಘಟಕ ನೀಡಿ ಇದರಲ್ಲಿ ಸಾಮಾನ್ಯ ಫಲಾನುಭವಿಗಳಿಗೆ ಶೇ.50% ಸಹಾಯಧನ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಹಿಳೆಯರಿಗೆ ಶೇ.75% ರಷ್ಟು ಸಹಾಯ ಧನದಲ್ಲಿ 3,642 ಫಲಾನುಭವಿ ಮಹಿಳೆಯರಿಗೆ ಒಟ್ಟು ₹ 750.00 ಲಕ್ಷಗಳ ಅನುದಾನದಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.

7. ಹಾಲು ಉತ್ಪಾದಕರಿಗೆ ಉತ್ತೇಜನ ನೀಡಲು ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖಾಂತರ ಸರಬರಾಜು ಮಾಡಲಾದ ಪ್ರತಿ ಲೀಟರ್ ಹಾಲಿಗೆ ₹ 4/– ಗಳ ಪ್ರೋತ್ಸಾಹ ಧನವಾಗಿ ನೀಡಲಾಗುತ್ತಿದ್ದು ಈ ಯೋಜನೆಗೆ ವಾರ್ಷಿಕ ₹ 825.00 ಕೋಟಿಗಳ ಅನುದಾನ ನಿಗಧಿಪಡಿಸಲಾಗಿದೆ ಮತ್ತು ಸೆಪ್ಟೆಂಬರ್ ಅಂತ್ಯದವರೆಗೆ ₹ 473.00 ಕೋಟಿಗಳನ್ನು ಈಗಾಗಲೇ ವಿತರಿಸಲಾಗಿದೆ.

8. ಹಾಲು ಉತ್ಪಾದಕರಿಗೆ ಉತ್ತೇಜನ ಕಾರ್ಯಕ್ರಮದ ಉಳಿಕೆ ಅನುದಾನದಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಪ್ರತಿ ಫಲಾನುಭವಿಗೆ ಅವರ ಆಸಕ್ತಿ ಅಥವಾ ಇಚ್ಛೆಯಂತೆ ಈ ಕೆಳಕಂಡ ಘಟಕಗಳಲ್ಲಿ ಒಂದು ಘಟಕವನ್ನು ಒದಗಿಸಲಾಗುವುದು.

   1. ಹೈನುಗಾರಿಕೆಗಾಗಿ 2 ಮಿಶ್ರತಳಿ ಹಸು ಅಥವಾ 2 ಸುಧಾರಿತ ಎಮ್ಮೆಗಳ ಒಂದು ಘಟಕ.

   2. ಕುರಿ ಅಥವಾ ಮೇಕೆ ಘಟಕ [20+1].

   3. ಹಂದಿ ಹಾಗೂ ಕೋಳಿ ಸಾಕಾಣಿಕೆ ಘಟಕ:– ಹಂದಿ [3+1] + 45 ಗಿರಿಜನ ಕೋಳಿ ಘಟಕ.

   4. ಕೋಳಿ ಘಟಕ [ಮಾಂಸದ ಕೋಳಿಗಳ ಘಟಕ– 500 ಕೋಳಿಗಳು].

   ಘಟಕದ ಮೊತ್ತ: ಮಾಂಸದ ಕೋಳಿ ಘಟಕದ ಮೊತ್ತ ₹ 1,50,000/– ಹಾಗೂ ಉಳಿದ ಘಟಕಗಳ ಮೊತ್ತ ತಲಾ ₹ 1,00,000/– ಇದ್ದು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ. 75ರಷ್ಟು ಸಹಾಯ ಧನ ಅಥವಾ ₹ 75,000/–, ಇದರಲ್ಲಿ ಯಾವುದು ಕಡಿಮೆಯೋ ಆ ಮೊತ್ತ

ಹಾಗೂ ಉಳಿದ ಮೊತ್ತ ಬ್ಯಾಂಕ ನೆರವಿನೊಂದಿಗೆ ಅಥವಾ ಫಲಾನುಭವಿಯ ಇತರೆ ಮೂಲಗಳಿಂದ ಪಾವತಿಸುವುದು.

9. ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಹೈನುಗಾರಿಕೆಗಾಗಿ ಎರಡು ಹೈನುರಾಸುಗಳ ಘಟಕವನ್ನು (₹ 1.00 ಲಕ್ಷ ಘಟಕದ ವೆಚ್ಚ) ಶೇ.75% ರ ಸಹಾಯಧನ ಹಾಗೂ ಶೇ.25% ಬ್ಯಾಂಕ್ ನೆರವಿನೊಂದಿಗೆ ವಿತರಿಸಲು 2014–15ನೇ ಸಾಲಿಗೆ ₹ 567.29 ಲಕ್ಷ ನಿಗಧಿಯಾಗಿದ್ದು, 756 ಫಲಾನುಭವಿಗಳಿಗೆ ಸೌಲಭ್ಯವನ್ನು ನೀಡಲು ಕಾರ್ಯಕ್ರಮ ರೂಪಿಸಿದೆ.

10. ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಹೈನುಗಾರಿಕೆಗಾಗಿ ಎರಡು ಹೈನುರಾಸುಗಳ ಘಟಕವನ್ನು (₹ 1.00 ಲಕ್ಷ ಘಟಕದ ವೆಚ್ಚ) ಶೇ.75% ರ ಸಹಾಯಧನ ಹಾಗೂ ಶೇ.25%ರ ಬ್ಯಾಂಕ್ ನೆರವಿನೊಂದಿಗೆ ವಿತರಿಸಲು 2014–15ನೇ ಸಾಲಿಗೆ ₹ 1397.25 ಲಕ್ಷ ನಿಗಧಿಯಾಗಿದ್ದು, 1,863 ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು ಕಾರ್ಯಕ್ರಮ ರೂಪಿಸಿದೆ.

11. ಪ್ರದೇಶ ನಿರ್ದಿಷ್ಟ ಖನಿಜ ಮಿಶ್ರಣ ಪೂರೈಕೆ ಯೋಜನೆಯಡಿ ಜಾನುವಾರುಗಳಿಗೆ ಕೆಲವು ಅತಿಮುಖ್ಯ ಖನಿಜಾಂಶಗಳು ಅವುಗಳ ಬೆಳವಣಿಗೆ, ಸಾಮಾನ್ಯ ಆರೋಗ್ಯ, ಸಂತಾನೊತ್ಪತ್ತಿ ಉತ್ಪಾದನೆ ಹೆಚ್ಚಿಸಲು ಹಾಗೂ ದೇಹದ ಕೆಲವು ಮುಖ್ಯವಾದ ಕ್ರಿಯೆಗಳಿಗೆ ಅವಶ್ಯವಾಗಿದ್ದು, ರೈತರ ಜಾನುವಾರುಗಳಿಗೆ ಪ್ರತಿ ಹೈನು ರಾಸುಗೆ ಪ್ರತಿದಿನ 25 ಗ್ರಾಂನಂತೆ 80 ದಿನಗಳಿಗೆ ನೀಡಲು ಉದ್ದೇಶಿಸಲಾಗಿದ್ದು, ಪ್ರತಿ ಹೈನು ರಾಸುಗೆ ₹ 134/– ಗಳ ಪ್ರದೇಶ ನಿರ್ದಿಷ್ಟ ಖನಿಜ ಮಿಶ್ರಣವನ್ನು ಉಚಿತವಾಗಿ ಸರಬರಾಜು ಮಾಡಲಾಗುವುದು. 2014–15ನೇ ಸಾಲಿಗೆ ₹ 150/– ಲಕ್ಷ ಅನುದಾನ

ನಿಗಧಿಪಡಿಸಿದ್ದು, 1,11,936 ಫಲಾನುಭವಿಗಳಿಗೆ ಈ ಸೌಲಭ್ಯ ಒದಗಿಸಲು ಕಾರ್ಯಕ್ರಮ ರೂಪಿಸಲಾಗಿದೆ.

12. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ವತಿಯಿಂದ ಶೇ75% ಸಹಾಯಧನದೊಂದಿಗೆ ಗಿರಿಜನ ಉಪ ಯೋಜನೆಯಡಿ 128 ಕುರಿ ಘಟಕ ಮತ್ತು 76 ಮೇಕೆ ಘಟಕಕ್ಕಾಗಿ ಒಟ್ಟು ₹ 78.00 ಲಕ್ಷ ಅನುದಾನ ಹಾಗೂ ವಿಶೇಷ ಘಟಕ ಯೋಜನೆಯಡಿ 320 ಕುರಿ ಘಟಕ ಮತ್ತು 102 ಮೇಕೆ ಘಟಕಕ್ಕಾಗಿ ಒಟ್ಟು ₹ 130.00 ಲಕ್ಷ ಅನುದಾನ ನಿಗಧಿಯಾಗಿದ್ದು ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಲಾಗುತ್ತಿದೆ

ಘಟಕದ ವಿವರ:–

ಕುರಿ ಘಟಕ 10+1 ₹ 52,000–00

ಮೇಕೆ ಘಟಕ 10+1 ₹ 49,000–00

ಆಯುಕ್ತರು

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ

ಲೋಕಾಯುಕ್ತ ದಾಳಿಯಿಂದ ವಶಪಡಿಸಿಕೊಂಡಿರುವ ಆಸ್ತಿ

1082 (1570); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) 2014–15ನೇ ಸಾಲಿನಲ್ಲಿ ರಾಜ್ಯವ್ಯಾಪ್ತಿ ಲೋಕಾಯುಕ್ತ ದಾಳಿಗೆ ತುತ್ತಾದ ಸಮೂಹ 'ಎ' ಮತ್ತು 'ಬಿ' ದರ್ಜೆ ಅಧಿಕಾರಿಗಳು ಹಾಗೂ ಇತರೆ ವೃಂದದ ನೌಕರರ ಸಂಖ್ಯೆ ಎಷ್ಟು;

ಆ) ಲೋಕಾಯುಕ್ತ ಅಧಿಕಾರಿಗಳು ಇವರಿಂದ ವಶಪಡಿಸಿಕೊಂಡಿರುವ ಆಸ್ತಿ ಮತ್ತು ಹಣದ ಮೊತ್ತವೆಷ್ಟು (ಅಧಿಕಾರಿಗಳು, ವೃಂದವಾರು ಮತ್ತು ನೌಕರರ ಹೆಸರುಗಳು ಮತ್ತು ದೊರೆತ ಆಸ್ತಿ ಮೊತ್ತದ ಮೌಲ್ಯದ ವಿವರ ನೀಡುವುದು)